ಕರ್ನಾಟಕ ಸರ್ಕಾರ

ಸಂಖ್ಯೆ: ಕಾಶಿಇ/133/ಪಿಂಚಣಿ/ಸಿಆರ್1/2011-12

ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ,
ಬೆಂಗಳೂರು, ದಿನಾಂಕ: 31 -12-2018

## ಸುತ್ತೋಲೆ

ವಿಷಯ: ಯು.ಜಿ.ಸಿ. ವೇತನ ಶ್ರೇಣಿಯಲ್ಲಿ ವೇತನ ಪಡೆಯುತ್ತಿರುವ ಗ್ರೂಪ್-'ಎ' ಸಹಾಯಕ/ ಸಹ ಪ್ರಾಧ್ಯಾಪಕರುಗಳಿಗೆ ಸಾಮೂಹಿಕ ವಿಮೆ ಕಂತನ್ನು ಕಟಾಯಿಸುವ ಬಗ್ಗೆ.

ಉಲ್ಲೇಖ: 1) ಸರ್ಕಾರದ ಆದೇಶ ಸಂಖ್ಯೆ: ಇಡಿ 148 ಡಿಸಿಇ 2015, ದಿ:01-02-2018.
2) ಅಧ್ಯಕ್ಷರು, ಕೆ.ಜಿ.ಸಿ.ಟಿ.ಎ., ಬೆಂಗಳೂರು, ಇವರ ಮನವಿ ದಿ:11-04-2018.
3) ಸರ್ಕಾರದ ಪತ್ರ ಸಂಖ್ಯೆ:ಇಡಿ-126-ಡಿಸಿಇ-2018, ದಿ:02-06-2018.
4) ಈ ಕಛೇರಿಯ ನೇಮಕಾತಿ ವಿಭಾಗದ ಕಛೇರಿ ಟಿಪ್ಪಣಿ ಸಂಖ್ಯೆ:ಕಾಶಿಇ/75/ ಇತರೆ/2016-17/ನೇವಿ-1, ದಿನಾಂಕ:04-07-2018.
5) ಈ ಕಛೇರಿಯ ಸಮಸಂಖ್ಯೆ ಪತ್ರ ದಿನಾಂಕ:19-07-2018
6) ಸರ್ಕಾರದ ಪತ್ರ ಸಂಖ್ಯೆ:ಇಡಿ-126-ಡಿಸಿಇ-2018, ದಿ:14-12-2018.

*******

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ(1) ಮತ್ತು (6)ರ ಸರ್ಕಾರದ ಆದೇಶ/ ಪತ್ರದಲ್ಲಿ ಯು.ಜಿ.ಸಿ. ವೇತನ ಶ್ರೇಣಿಯಲ್ಲಿ ರೂ.7,000/- ಮತ್ತು ರೂ.7,000/- ಮೇಲ್ಪಟ್ಟು ಎ.ಜಿ.ಪಿ. ಪಡೆಯುತ್ತಿರುವ ಸಹಾಯಕ/ ಸಹ ಪ್ರಾಧ್ಯಾಪಕರುಗಳಿಗೆ ಸಾಮೂಹಿಕ ವಿಮೆ(ಜಿ.ಐ.ಎಸ್.) ವಂತಿಗೆಯನ್ನು ಮಾಹೆಯಾನ ರೂ.180/- ರಿಂದ ರೂ.240/-ಕ್ಕೆ ಹೆಚ್ಚಿಸಿ ಸರ್ಕಾರವು ಉಲ್ಲೇಖಿತ(6)ರ ನಿರ್ದೇಶನದಲ್ಲಿ ಅನುಮತಿ ನೀಡಿರುತ್ತಾರೆ. ಉಲ್ಲೇಖ(1) & (6)ರ ಸರ್ಕಾರದ ಆದೇಶ/ ಪತ್ರವನ್ನು ಈ ಸುತ್ತೋಲೆಯೊಂದಿಗೆ ಲಗತ್ತಿಸಿದ್ದು ಈ ಕೆಳಕಂಡಂತೆ ಕ್ರಮವಹಿಸಲು ಸೂಚಿಸಿದೆ:-

1) ಪ್ರಸ್ತುತ ಕರ್ತವ್ಯ ನಿರ್ವಹಿಸುತ್ತಿರುವ ರೂ.7,000/- ಮತ್ತು ರೂ.7,000/- ಮೇಲ್ಪಟ್ಟು ಎ.ಜಿ.ಪಿ. ಪಡೆಯುತ್ತಿರುವ ಸಹಾಯಕ/ ಸಹ ಪ್ರಾಧ್ಯಾಪಕರುಗಳಿಗೆ ಸಾಮೂಹಿಕ ವಿಮೆ (ಜಿ.ಐ.ಎಸ್.) ವಂತಿಗೆಯನ್ನು ಮಾಹೆಯಾನ ರೂ.180/- ರಿಂದ ರೂ.240/-ಕ್ಕೆ ಹೆಚ್ಚಿಸಿ ಕಟಾವಣೆ ಮಾಡಲು ಸೂಚಿಸಲಾಗಿದೆ.

2) ಈಗಾಗಲೇ ವಯೋನಿವೃತ್ತಿ ಹೊಂದಿರುವ ರೂ.7,000/- ಮತ್ತು ರೂ.7,000/- ಮೇಲ್ಪಟ್ಟು ಎ.ಜಿ.ಪಿ. ಪಡೆಯುತ್ತಿರುವ ಸಹಾಯಕ/ ಸಹ ಪ್ರಾಧ್ಯಾಪಕರು/ ಪ್ರಾಂಶುಪಾಲರು/ ಪ್ರಭಾರ ಪ್ರಾಂಶುಪಾಲರುಗಳಿಗೆ ಸಾಮೂಹಿಕ ವಿಮೆ(ಜಿ.ಐ.ಎಸ್.) ವಂತಿಗೆಯನ್ನು ಮಾಹೆಯಾನ ರೂ.180/- ರಿಂದ ರೂ.240/-ಕ್ಕೆ ಹೆಚ್ಚಿಸಿ ಕಟಾಯಿಸಿದ್ದಲ್ಲಿ ವ್ಯತ್ಯಾಸದ ಮೊತ್ತವನ್ನು ಪ್ರಾಂಶುಪಾಲರ ಹಂತದಲ್ಲಿಯೇ ಮಂಜೂರು ಮಾಡಲು ಸೂಚಿಸಲಾಗಿದೆ.

ಅಡಕ: ಉಲ್ಲೇಖ(1) ಮತ್ತು (6)ರ
ಸರ್ಕಾರದ ಪ್ರತಿಗಳು

ಕಾಲೇಜು ಶಿಕ್ಷಣ ಆಯುಕ್ತರು

**ಇವರಿಗೆ:-**

1. ಸರ್ಕಾರದ ಪ್ರಧಾನ ಕಾರ್ಯದರ್ಶಿಯವರು, ಶಿಕ್ಷಣ ಇಲಾಖೆ (ಉನ್ನತ ಶಿಕ್ಷಣ), ಬಹುಮಹಡಿಗಳ ಕಟ್ಟಡ, ಬೆಂಗಳೂರು- ಮಾಹಿತಿಗಾಗಿ

2. ಪ್ರಾದೇಶಿಕ ಜಂಟಿ ನಿರ್ದೇಶಕರುಗಳು, ಕಾಲೇಜು ಶಿಕ್ಷಣ ಇಲಾಖೆ, ಬೆಂಗಳೂರು, ಮೈಸೂರು, ಮಂಗಳೂರು, ಕಲಬುರಗಿ, ಶಿವಮೊಗ್ಗ ಹಾಗೂ ಧಾರವಾಡ – ಮಾಹಿತಿ ಹಾಗೂ ಅಗತ್ಯ ಕ್ರಮಕ್ಕಾಗಿ
3. ಎಲ್ಲಾ ಸರ್ಕಾರಿ ಪ್ರಥಮ ದರ್ಜೆ ಮತ್ತು ಕಾನೂನು ಕಾಲೇಜುಗಳ ಪ್ರಾಂಶುಪಾಲರುಗಳಿಗೆ – (ಅಗತ್ಯ ಕ್ರಮಕ್ಕಾಗಿ).
4. ಮ್ಯಾನೇಜರ್/ಅಧೀಕ್ಷಕರು, ನೇಮಕಾತಿ ವಿಭಾಗ, ಕೇಂದ್ರ ಕಛೇರಿ, ಬೆಂಗಳೂರು – ಮಾಹಿತಿಗಾಗಿ
5. ಮ್ಯಾನೇಜರ್/ಅಧೀಕ್ಷಕರು, ಹಣ ಮತ್ತು ಪಾವತಿ ವಿಭಾಗ, ಕೇಂದ್ರ ಕಛೇರಿ, ಬೆಂಗಳೂರು – ಮಾಹಿತಿಗಾಗಿ
6. ಮಾಹಿತಿ ಅಧಿಕಾರಿಗಳು, ಕೇಂದ್ರ ಕಛೇರಿ, ಕಾಲೇಜು ಶಿಕ್ಷಣ ಇಲಾಖೆ, ಬೆಂಗಳೂರು – ಸದರಿ ಸುತ್ತೋಲೆಯನ್ನು ಇಲಾಖೆಯ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು ತಿಳಿಸಲಾಗಿದೆ.
7. ಹೆಚ್ಚುವರಿ ಪ್ರತಿ ಹಾಗೂ ಕಛೇರಿ ಪ್ರತಿ

ಕರ್ನಾಟಕ ಸರ್ಕಾರ

ಸಂಖ್ಯೆ: ಇಡಿ 126 ಡಿಸಿಇ 2018

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿ ಕಟ್ಟಡ,
ಬೆಂಗಳೂರು, ದಿನಾಂಕ: 14.12.2018

ಇಂದ:

ಸರ್ಕಾರದ ಪ್ರಧಾನ ಕಾರ್ಯದರ್ಶಿ,
ಶಿಕ್ಷಣ ಇಲಾಖೆ (ಉನ್ನತ ಶಿಕ್ಷಣ),
ಬೆಂಗಳೂರು.

ಗೆ:

ಆಯುಕ್ತರು,
ಕಾಲೇಜು ಶಿಕ್ಷಣ ಇಲಾಖೆ,
ಬೆಂಗಳೂರು.

ಮಾನ್ಯರೆ,

ವಿಷಯ: ಯು.ಜಿ.ಸಿ. ವೇತನ ಶ್ರೇಣಿಯಲ್ಲಿ ವೇತನ ಪಡೆಯುತ್ತಿರುವ ಗ್ರೂಪ್-ಎ ಸಹಾಯಕ / ಸಹ ಪ್ರಾಧ್ಯಾಪಕರುಗಳಿಗೆ ಸಾಮೂಹಿಕ ವಿಮೆ ಕಂತನ್ನು ಕಟಾಯಿಸುವ ಬಗ್ಗೆ

ಉಲ್ಲೇಖ: ತಮ್ಮ ಪತ್ರ ಸಂಖ್ಯೆ: ಕಾಶಿಇ/133/ಪಿಂಚಣಿ/ಸಿ.ಆರ್/2011-12, ದಿನಾಂಕ : 19.07.2018

------

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ ಪತ್ರದಲ್ಲಿನ ಪ್ರಸ್ತಾವನೆಯನ್ನು ಪರಿಶೀಲಿಸಲಾಗಿ, ರೂ.7000/- ಮತ್ತು ರೂ.7000/- ಮೇಲ್ಪಟ್ಟು ಎ.ಜಿ.ಪಿ. ಪಡೆಯುತ್ತಿರುವ ಸಹಾಯಕ / ಸಹ ಪ್ರಾಧ್ಯಾಪಕರಿಗೆ ಸಾಮೂಹಿಕ ವಿಮಾ (ಜಿ.ಐ.ಎಸ್.) ವಂತಿಗೆಯನ್ನು ಮಾಹೆಯಾನ ರೂ.180/- ರಿಂದ ರೂ.240/- ಕ್ಕೆ ಹೆಚ್ಚಿಸಿ ಸುತ್ತೋಲೆಯನ್ನು ಹೊರಡಿಸಲು ಸರ್ಕಾರದ ಅನುಮತಿ ನೀಡಲಾಗಿದೆ ಎಂದು ತಿಳಿಸಲು ನಿರ್ದೇಶಿತಳಾಗಿದ್ದೇನೆ.

ತಮ್ಮ ನಂಬುಗೆಯ,

(ಜೆ.ಆರ್. ಅನ್ನಪೂರ್ಣ)
ಸರ್ಕಾರದ ಉಪ ಕಾರ್ಯದರ್ಶಿ,
ಶಿಕ್ಷಣ ಇಲಾಖೆ (ಕಾಲೇಜು & ತಾಂತ್ರಿಕ).

1673
20 DEC 2018
21/12/2018

134

## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಕಾಲೇಜು ಶಿಕ್ಷಣ ಇಲಾಖೆಯ ಹಿರಿಯ ಶ್ರೇಣಿ ಮತ್ತು ಆಯ್ಕೆ ಶ್ರೇಣಿ ಉಪನ್ಯಾಸಕರ ವರ್ಗೀಕರಣದ ಬಗ್ಗೆ.

ಓದಲಾಗಿದೆ: (1) ಸರ್ಕಾರದ ಪತ್ರ ಸಂಖ್ಯೆ:ಇಡಿ 54 ಡಿಸಿಇ 2002, ದಿನಾಂಕ: 08/13-05-2002.
(2) ಸರ್ಕಾರಿ ಆದೇಶ ಸಂಖ್ಯೆ:ಇಡಿ 266 ಡಿಸಿಇ 2001, ದಿನಾಂಕ: 06-09-2002.
(3) ಕರ್ನಾಟಕ ಆಡಳಿತ ನ್ಯಾಯಮಂಡಳಿಯು ಅರ್ಜಿ ಸಂಖ್ಯೆ:358-367/2003 ಮತ್ತು 178-182/2009 ರಲ್ಲಿ ದಿನಾಂಕ: 23-07-2009 ರಂದು ನೀಡಿದ ತೀರ್ಪು.
(4) ಕರ್ನಾಟಕ ಉಚ್ಚ ನ್ಯಾಯಾಲಯವು ರಿಟ್ ಅರ್ಜಿ ಸಂಖ್ಯೆ: 28744/2010 ಮತ್ತಿತರೆ ಪ್ರಕರಣಗಳಲ್ಲಿ ದಿನಾಂಕ: 14-08-2014 ರಂದು ನೀಡಿದ ತೀರ್ಪು.

**ಪ್ರಸ್ತಾವನೆ:**

ಓದಲಾದ (1) ರ ಸರ್ಕಾರದ ಪತ್ರದಲ್ಲಿ ಕಾಲೇಜು ಶಿಕ್ಷಣ ಇಲಾಖೆಯ ಹಿರಿಯ ಶ್ರೇಣಿ ಹಾಗೂ ಆಯ್ಕೆ ವೇತನ ಶ್ರೇಣಿ ಉಪನ್ಯಾಸಕರನ್ನು ಗ್ರೂಪ್ 'ಬಿ' ಶ್ರೇಣಿಗೆ ಸೇರಿದ ಅಧಿಕಾರಿಗಳು ಎಂದು ಪರಿಗಣಿಸಲಾಗಿದೆ ಎಂದು ಕಾಲೇಜು ಶಿಕ್ಷಣ ಆಯುಕ್ತರಿಗೆ ತಿಳಿಸಲಾಗಿತ್ತು. ನಂತರ ಓದಲಾದ (2) ರ ಸರ್ಕಾರಿ ಆದೇಶದಲ್ಲಿ ಆದೇಶದ ದಿನಾಂಕದವರೆಗೆ ಪ್ರಾಂಶುಪಾಲರು ಗ್ರೇಡ್-1 ವೃಂದಕ್ಕೆ ನೀಡಲಾದ ಪದೋನ್ನತಿಗಳನ್ನು ಪ್ರಾಂಶುಪಾಲರು ಗ್ರೇಡ್-1 ವೃಂದದ ಬ್ಯಾಕ್-ಲಾಗ್ ಹುದ್ದೆಗಳನ್ನು ಗುರುತಿಸಿ ಕ್ರಮಬದ್ಧಗೊಳಿಸತಕ್ಕದ್ದೆಂದು ಹಾಗೂ ಈ ವೃಂದಕ್ಕೆ ಪದೋನ್ನತಿ ನೀಡುವಾಗ ಮೀಸಲಾತಿ ನೀತಿಯನ್ನು ಅನ್ವಯಿಸತಕ್ಕದ್ದೆಂದು ಆದೇಶಿಸಲಾಗಿತ್ತು.

ಕರ್ನಾಟಕ ಆಡಳಿತ ನ್ಯಾಯಮಂಡಳಿಯಲ್ಲಿ ಪ್ರಶ್ನಿಸಲಾದ ಸರ್ಕಾರದ ದಿನಾಂಕ: 08/13-05-2002 ರ ಪತ್ರ ಮತ್ತು ದಿನಾಂಕ:06-09-2002 ರ ಸರ್ಕಾರಿ ಆದೇಶವನ್ನು ಮಾನ್ಯ ನ್ಯಾಯಮಂಡಳಿಯು ಓದಲಾದ (3) ರಂತೆ ತೀರ್ಪನ್ನು ನೀಡಿ ತಳ್ಳಿ ಹಾಕಿದೆ. ಸದರಿ ತೀರ್ಪಿನಲ್ಲಿ ಮಾನ್ಯ ನ್ಯಾಯಮಂಡಳಿಯು ಕಾಲೇಜು ಶಿಕ್ಷಣ ಇಲಾಖೆಯ ಉಪನ್ಯಾಸಕರ ವರ್ಗೀಕರಣವನ್ನು ಕರ್ನಾಟಕ ನಾಗರೀಕ ಸೇವೆಗಳು (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿ 1957 ರ ಅಡಿಯಲ್ಲಿಯೆ ನಿರ್ಧರಿಸತಕ್ಕದ್ದೆಂದು ಪ್ರತಿಪಾದಿಸುತ್ತಾ, ಹಿರಿಯ ಶ್ರೇಣಿ ಮತ್ತು ಆಯ್ಕೆ ಶ್ರೇಣಿ ಉಪನ್ಯಾಸಕರ ಹುದ್ದೆಗಳು ಮುಂಬಡ್ತಿಯ ಹುದ್ದೆಗಳಾಗಿರುತ್ತವೆ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದೆ.

ಕರ್ನಾಟಕ ಆಡಳಿತ ನ್ಯಾಯಮಂಡಳಿಯ ತೀರ್ಪಿನ ವಿರುದ್ಧ ಸರ್ಕಾರ ದಾಖಲಿಸಿದ್ದ ರಿಟ್ ಅರ್ಜಿಗಳಲ್ಲಿ ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯವು ಓದಲಾದ (4) ರಂತೆ ತೀರ್ಪನ್ನು ನೀಡಿದ್ದು, ತೀರ್ಪಿನಲ್ಲಿ ಹಿರಿಯ ಶ್ರೇಣಿ ಮತ್ತು ಆಯ್ಕೆ ಶ್ರೇಣಿ ಹುದ್ದೆಗಳ ವರ್ಗೀಕರಣವನ್ನು ಕರ್ನಾಟಕ ನಾಗರೀಕ ಸೇವೆಗಳು (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿ 1957 ರ ಅಡಿಯಲ್ಲಿಯೆ ನಿರ್ಧರಿಸತಕ್ಕದ್ದೆಂಬುದಾಗಿ ನ್ಯಾಯಮಂಡಳಿಯು ವ್ಯಕ್ತಪಡಿಸಿರುವ ಅಭಿಪ್ರಾಯವನ್ನು ಮಾನ್ಯ

133

ನ್ಯಾಯಾಲಯವು ಒಪ್ಪಿರುವುದಿಲ್ಲ. ಈ ಹುದ್ದೆಗಳು ಸ್ಥಾನೀಕರಣದ ಮೂಲಕ ತುಂಬುವ ಹುದ್ದೆಗಳಾಗಿದ್ದು, ಮುಂಬಡ್ತಿಯಿಂದ ತುಂಬುವ ಹುದ್ದೆಗಳಾಗಿರುವುದಿಲ್ಲವೆಂದು ಮಾನ್ಯ ನ್ಯಾಯಾಲಯವು ಅಭಿಪ್ರಾಯಿಸಿದ್ದಾಗ್ಯೂ ಸರ್ಕಾರದ ದಿನಾಂಕ:08/13-05-2002 ರ ಪತ್ರ ಮತ್ತು ದಿನಾಂಕ: 06-09-2002 ರ ಆದೇಶವನ್ನು ತಳ್ಳಿ ಹಾಕಿದ ಕರ್ನಾಟಕ ಆಡಳಿತ ನ್ಯಾಯಮಂಡಳಿಯ ತೀರ್ಪಿಗೆ ಯಾವುದೇ ಹಸ್ತಕ್ಷೇಪ ಮಾಡಿರುವುದಿಲ್ಲ. ಮಾನ್ಯ ನ್ಯಾಯಮಂಡಳಿಯು ಮತ್ತು ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯದ ಆದೇಶಗಳನ್ನು ಅನುಷ್ಠಾನಗೊಳಿಸುವ ನಿಟ್ಟಿನಲ್ಲಿ ಕಾನೂನು ಇಲಾಖೆಯ ಅಭಿಪ್ರಾಯವನ್ನು ಪಡೆಯಲಾಗಿ, ಆ ಇಲಾಖೆಯು ಕಾಲೇಜು ಶಿಕ್ಷಣ ಇಲಾಖೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಬೋಧಕ ವೃಂದದ ಸಹಾಯಕ ಪ್ರಾಧ್ಯಾಪಕರ ಹುದ್ದೆಯಿಂದ ಪ್ರಾಂಶುಪಾಲರು (ಗ್ರೇಡ್-2) ವೃಂದದವರೆಗಿನ ಎಲ್ಲಾ ಹುದ್ದೆಗಳನ್ನು ಯು.ಜಿ.ಸಿ. ವೇತನ ಶ್ರೇಣಿ ಆಧಾರದ ಮೇಲೆ ವರ್ಗೀಕರಣಗೊಳಿಸತಕ್ಕದ್ದು ಎಂಬುದು ಮಾನ್ಯ ಉಚ್ಚ ನ್ಯಾಯಾಲಯದ ತೀರ್ಪಿನಿಂದ ಸ್ಪಷ್ಟವಾಗುತ್ತದೆ ಎಂದು ಅಭಿಪ್ರಾಯಿಸಿದೆ.

ಹಾಗೆಯೇ, ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯು ತನ್ನ ಅಭಿಪ್ರಾಯದಲ್ಲಿ ಬೋಧಕ ವೃಂದದ ಹುದ್ದೆಗಳು ರಾಜ್ಯ ವೇತನ ಶ್ರೇಣಿಯಲ್ಲಿ ಹೊಂದಿದ್ದ ವರ್ಗೀಕರಣವನ್ನು 1986 ರಲ್ಲಿ ಯು.ಜಿ.ಸಿ. ವೇತನ ಶ್ರೇಣಿ ಜಾರಿಯಾದಾಗ ಮರುಪದನಾಮಗೊಳಿಸಲಾದ ತತ್ಸಮಾನ ದರ್ಜೆಯ ಬೋಧಕ ವೃಂದ ಹುದ್ದೆಗಳಿಗೆ ಅನ್ವಯಿಸಿಕೊಂಡು ಹುದ್ದೆಗಳನ್ನು ವರ್ಗೀಕರಿಸಬೇಕಾಗುತ್ತದೆ ಎಂದು ತಿಳಿಸಿರುತ್ತದೆ.

ಯು.ಜಿ.ಸಿ. ವೇತನ ಶ್ರೇಣಿಗಳು ಜಾರಿಗೆ ಬರುವ ಪೂರ್ವದಲ್ಲಿ ರಾಜ್ಯ ವೇತನ ಶ್ರೇಣಿಗಳ ಅನುಸಾರ ಉಪನ್ಯಾಸಕ ಹುದ್ದೆಯು 'ಬಿ' ದರ್ಜೆಯ ಹುದ್ದೆಯಾಗಿದ್ದು, ರೀಡರ್ ಮತ್ತು ಪ್ರಾಧ್ಯಾಪಕರ ಹುದ್ದೆಗಳು 'ಎ' ದರ್ಜೆಯ ಹುದ್ದೆಗಳಾಗಿದ್ದವು. ನಂತರ 1986 ರ ಯು.ಜಿ.ಸಿ. ವೇತನ ಶ್ರೇಣಿಗಳಲ್ಲಿ ಸದರಿ ಹುದ್ದೆಗಳನ್ನು ಕ್ರಮವಾಗಿ ಉಪನ್ಯಾಸಕರು, ಹಿರಿಯ ಶ್ರೇಣಿ ಉಪನ್ಯಾಸಕರು ಮತ್ತು ಆಯ್ಕೆ ಶ್ರೇಣಿ ಉಪನ್ಯಾಸಕರೆಂದು ಮರುಪದನಾಮೀಕರಿಸಲಾಗಿದೆ. ಇದೇ ಪದನಾಮೀಕರಣವನ್ನು 1996 ರ ಯು.ಜಿ.ಸಿ. ವೇತನ ಶ್ರೇಣಿಗಳಲ್ಲಿ ಮುಂದುವರೆಸಲಾಗಿರುತ್ತದೆ.

ಆದುದರಿಂದ, ಮಾನ್ಯ ನ್ಯಾಯಾಲಯಗಳ ಆದೇಶಗಳು ಮತ್ತು ಕಾನೂನು ಹಾಗೂ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಗಳ ಅಭಿಪ್ರಾಯಗಳನ್ನು ಪರಿಶೀಲಿಸಿದ ಸರ್ಕಾರವು ಯು.ಜಿ.ಸಿ. ವೇತನ ಶ್ರೇಣಿಗಳ ಪ್ರಕಾರ ಕಾಲೇಜು ಶಿಕ್ಷಣ ಇಲಾಖೆಯ ಬೋಧಕ ವೃಂದದ ಹುದ್ದೆಗಳನ್ನು ಪುನರ್‌ವರ್ಗೀಕರಿಸುವವರೆಗೆ ಇಲಾಖೆಯ ಹಿರಿಯ ಶ್ರೇಣಿ ಉಪನ್ಯಾಸಕರು ಹಾಗೂ ಆಯ್ಕೆ ಶ್ರೇಣಿ ಉಪನ್ಯಾಸಕರ ಹುದ್ದೆಗಳನ್ನು ಗ್ರೂಪ್ 'ಎ' ಶ್ರೇಣಿಗೆ ಸೇರಿದ ಹುದ್ದೆಗಳೆಂದು ಪರಿಗಣಿಸಲು ತೀರ್ಮಾನಿಸಿದೆ. ಅದರಂತೆ ಈ ಆದೇಶ.

**<u>ಸರ್ಕಾರಿ ಆದೇಶ ಸಂಖ್ಯೆ: ಇಡಿ 148 ಡಿಸಿಇ 2015</u>**
**<u>ಬೆಂಗಳೂರು, ದಿನಾಂಕ:01-02-2018</u>**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಸರ್ಕಾರದ ಪತ್ರ ಸಂಖ್ಯೆ:ಇಡಿ 54 ಡಿಸಿಇ 2002, ದಿನಾಂಕ:08/13-05-2002 ಮತ್ತು ದಿನಾಂಕ:06-09-2002 ರ ಸರ್ಕಾರಿ ಆದೇಶ ಸಂಖ್ಯೆ:ಇಡಿ 266 ಡಿಸಿಇ 2001 ನ್ನು ತಕ್ಷಣದಿಂದ ಜಾರಿಗೆ ಬರುವಂತೆ ಹಿಂಪಡೆಯಲಾಗಿದೆ ಹಾಗೂ ಯು.ಜಿ.ಸಿ. ವೇತನ ಶ್ರೇಣಿಗಳನ್ನು ಆಧಾರವಾಗಿಟ್ಟುಕೊಂಡು ಕಾಲೇಜು ಶಿಕ್ಷಣ ಇಲಾಖೆಯ ಬೋಧಕ ವೃಂದದ ಹುದ್ದೆಗಳನ್ನು ಪುನರ್‌ವರ್ಗೀಕರಿಸುವ ಬಗ್ಗೆ ಸರ್ಕಾರ ಮುಂದಿನ ತೀರ್ಮಾನ

ತೆಗೆದುಕೊಳ್ಳುವವರೆಗೆ ಕಾಲೇಜು ಶಿಕ್ಷಣ ಇಲಾಖೆಯ ಹಿರಿಯ ಶ್ರೇಣಿ ಮತ್ತು ಆಯ್ಕೆ ಶ್ರೇಣಿ ಉಪನ್ಯಾಸಕರ ಹುದ್ದೆಗಳನ್ನು ಗ್ರೂಪ್ 'ಎ' ಶ್ರೇಣಿಗೆ ಸೇರಿದ ಹುದ್ದೆಗಳೆಂದು ಪರಿಗಣಿಸಿದೆ.

ಈ ಆದೇಶವನ್ನು ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯ ಅನಧಿಕೃತ ಟಿಪ್ಪಣಿ ಸಂಖ್ಯೆ:ಸಿಆಸುಇ 137 ಸೇನಿಸಿ 2016, ದಿನಾಂಕ:30-08-2016, ಕಾನೂನು ಇಲಾಖೆಯ ಅನಧಿಕೃತ ಟಿಪ್ಪಣಿ ಸಂಖ್ಯೆ:LAW 151 OPN 2016, ದಿನಾಂಕ:28-05-2016 ಮತ್ತು ಆರ್ಥಿಕ ಇಲಾಖೆಯ ಅನಧಿಕೃತ ಟಿಪ್ಪಣಿ ಸಂಖ್ಯೆ:ಆಇ 707 ಸೇ-2/2016, ದಿನಾಂಕ:29-09-2016 ರಲ್ಲಿ ನೀಡಿರುವ ಅಭಿಪ್ರಾಯಗಳನ್ವಯ ಹೊರಡಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಕೆ.ಶಿವಲಿಂಗಯ್ಯ) 1/2
ಸರ್ಕಾರದ ಅಧೀನ ಕಾರ್ಯದರ್ಶಿ,
ಶಿಕ್ಷಣ ಇಲಾಖೆ (ಕಾಲೇಜು ಶಿಕ್ಷಣ).

**ಕಾಲೇಜು ಶಿಕ್ಷಣ ಇಲಾಖೆ**

ಸಂಖ್ಯೆ:ಕಾಶಿಇ/12/ಯುಜಿಸಿ/2017-18/ನೇವಿ-1

ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ,
ಬೆಂಗಳೂರು, ದಿನಾಂಕ:

ಮೇಲ್ಕಂಡ ಸರ್ಕಾರದ ಆದೇಶವನ್ನು ಈ ಕೆಳಕಂಡವರ ಮಾಹಿತಿ ಹಾಗೂ ಅಗತ್ಯ ಕ್ರಮಕ್ಕಾಗಿ ಪರಿಚಲಿಸಲಾಗಿದೆ.

**ಇವರಿಗೆ,**

1) ಪ್ರಧಾನ ಮಹಾಲೇಖಪಾಲರು (ಜಿ&ಎಸ್ಎಸ್ಎ) & (ಎ & ಇ), ರವರ ಕಾರ್ಯದರ್ಶಿ, ಕರ್ನಾಟಕ ಹೊಸ ಕಟ್ಟಡ, "ಆಡಿಟ್ ಭವನ" ಅಂಚೆ ಪೆಟ್ಟಿಗೆ ಸಂಖ್ಯೆ:5398, ಬೆಂಗಳೂರು.
2) ಜಂಟಿ ನಿರ್ದೇಶಕರು, ಪ್ರಾದೇಶಿಕ ಕಛೇರಿ, ಕಾಲೇಜು ಶಿಕ್ಷಣ ಇಲಾಖೆ, ಬೆಂಗಳೂರು, ಮೈಸೂರು, ಶಿವಮೊಗ್ಗ, ಮಂಗಳೂರು, ಧಾರವಾಡ ಮತ್ತು ಕಲಬುರುಗಿ.
3) ಎಲ್ಲಾ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಪ್ರಾಂಶುಪಾಲರುಗಳಿಗೆ.

**ಪ್ರತಿ ರವಾನೆ:**

1) ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಶಿಕ್ಷಣ ಇಲಾಖೆ (ಉನ್ನತ ಶಿಕ್ಷಣ) ಬಹುಮಹಡಿಗಳ ಕಟ್ಟಡ, ಬೆಂಗಳೂರು.
2) ಕೇಂದ್ರ ಕಛೇರಿಯ ಎಲ್ಲಾ ಅಧಿಕಾರಿಗಳ ಆಪ್ತ ಸಹಾಯಕರುಗಳಿಗೆ.
3) ಕೇಂದ್ರ ಕಛೇರಿಯ ಎಲ್ಲಾ ವಿಭಾಗದ ಮ್ಯಾನೇಜರ್/ಅಧೀಕ್ಷಕರುಗಳಿಗೆ.
4) ವ್ಯವಸ್ಥಾಪಕರು, ಮಾಹಿತಿ ತಂತ್ರಜ್ಞಾನ ವಿಭಾಗ, ಕಾಲೇಜು ಶಿಕ್ಷಣ ಇಲಾಖೆ, ಕೇಂದ್ರ ಕಛೇರಿ, ಬೆಂಗಳೂರು -ಸದರಿ ಸರ್ಕಾರದ ಆದೇಶವನ್ನು ಇಲಾಖಾ ವೆಬ್‌ಸೈಟ್‌ನಲ್ಲಿ ಪ್ರಕಟಿಸುವಂತೆ ಸೂಚಿಸಲಾಗಿದೆ.
5) ಕಛೇರಿ ಪ್ರತಿ.

**ಕಾಲೇಜು ಶಿಕ್ಷಣ ಆಯುಕ್ತರು**